## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 270/2019 ಸಿ.ಡಬ್ಲ್ಯೂ –4 ಪಿ.ಡಬ್ಲ್ಯೂ -2

| | | |
|---|---|---|
| ಹೆಸರು | ಃ | ಗೌರಮ್ಮ |
| ತಂದೆಃ ಗಂಡ | ಃ | ರವೀಂದ್ರ ಮಾನೆ |
| ವಯಸ್ಸು | ಃ | ೩೨ ವರ್ಷ |
| ಉದ್ಯೋಗ | : | ಮನೆಕೆಲಸ |
| ವಾಸಸ್ಥಳ | ಃ | ಹೊನ್ನಳ್ಳಿ |

ದಿನಾಂಕಃ೧೮.೧೧.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

### ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ

ಆರೋಪಿತರ ಪರಿಚಯ ಇರುತ್ತದೆ. ಚಾಸಾ-1 ನನ್ನ ಗಂಡ, ಚಾಸಾ-2, 3, 5 ರಿಂದ 7 ರವರ ಪರಿಚಯ ಇರುತ್ತದೆ.

ದಿ.16.04.2018 ರಂದು ನಮ್ಮ ಊರಿನಲ್ಲಿ ಅಂಬೇಡ್ಕರ್ ಜಯಂತಿಯನ್ನು ಆಚರಿಸುತ್ತಿದ್ದರು. ಸದರಿ ಅಂಬೇಡ್ಕರ್ ಜಯಂತಿಯ ನಿಮಿತ್ಯ ಊಟವನ್ನು ಹಮ್ಮಿಕೊಂಡಿದ್ದರು. ಸದರಿ ದಿನಂದು ಚಾಸಾ-೧ ರವರು ಊಟಕ್ಕೆ ಕುಳಿತಾಗ ಆರೋಪಿತರೆಲ್ಲರೂ ಬಂದು ಚಾಸಾ-೧ ರವರಿಗೆ ಬೈದು ಹೊಡೆ ಬಡೆ ಮಾಡಿರುತ್ತಾರೆ. ಆರೋಪಿ ನಂ-೧ ಕಟ್ಟಿಗೆಯಿಂದ, ಆರೋಪಿ ನಂ-೨ ಕಲ್ಲಿನಿಂದ, ಆರೋಪಿ ನಂ-೩ ಬಾಯಿಯಿಂದ ಕಚ್ಚಿರುತ್ತಾನೆ. ಸದರಿ ಘಟನೆಯಲ್ಲಿ ಚಾಸಾ-೧ ರವರಿ ತೀವ್ರ ಸ್ವರೂಪದ ರಕ್ತಗಾಯಗಳು ಆದ ಕಾರಣ ನಾನು ಚಾಸಾ-೧ ರವರನ್ನು ಖಾಸಗಿ ಜೀಪಿನಲ್ಲಿ ಆಳಂದ ಪೋಲಿಸ್ ಠಾಣೆಗೆ ಕರೆದುಕೊಂಡು ಬಂದಿರುತ್ತೇನೆ. ಅಲ್ಲಿ ಪೋಲಿಸರು ತೀವ್ರ ಸ್ವರೂಒಪದ ಗಾಯಗಳು ಇದ್ದ ಕಾರಣ ಆಸ್ಪತ್ರೆಗೆ ಹೋಗಿ ದಾಖಲಾಗಿ ಎಂದು ಹೇಳಿದರು, ನಾನು ಆಸ್ಪತ್ರೆಗೆ ದಾಖಲಾದ ನಂತರ ಅಲ್ಲಿ ಒಬ್ಬ ಪೋಲಿಸರು ಬಂದು ಚಾಸಾ-೧ ರವರ ಹೇಳಿಕೆಯನ್ನು ಪಡೆದುಕೊಂಡರು, ನಂತರ ಹೆಚ್ಚಿನ ಚಿಕಿತ್ಸೆಗಾಗಿ ವೈದ್ಯರು ಕಲಬುರಗಿ ಆಸ್ಪತ್ರೆಗೆ ಕಳಿಸಿದರು. ನಂತರ ಚಿಕಿತ್ಸೆಯನ್ನು ಪಡೆದುಕೊಂಡು ಮನೆಗೆ ಬಂದಿರುತ್ತೇವೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ-೧ ಮತ್ತು ೨ ನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

### ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.

ಅಂಬೇಡ್ಕರ ಜಯಂತಿ ಇದ್ದ ಕಾರಣ ಚಾಸಾ-೧ ರವರು ಊಟ ಮಾಡುತ್ತಿದ್ದರು ಎಂದರೆ ಸರಿ. ಆಗ ಮಧ್ಯಾಹ್ನ ೧.೦೦ ಗಂಟೆ ಆಗಿತ್ತು ಎಂಧರೆ ಸರಿ. ಆರೊಪಿ ನಂ.೧ ಕಟ್ಟಿಗೆಯಿಂದ ಚಾಸಾ-೧ ರವರ ತಲೆಗೆ ಹೊಡೆದನು ಎಂದರೆ ಸರಿ. ಆರೋಪಿ ನಂ.೩ ಚಾಸಾ-೧ ರವರ ಎದೆಗೆ ಕಚ್ಚಿರುತ್ತಾನೆ ಎಂದರೆ ಸರಿ.

ನಾನು ಜಗಳವನ್ನು ಬಿಡಿಸಲು ಹೋದಾಗ ಆರೊಪಿ ನಂ-೩ ನನ್ನನ್ನು ನೂಕಿಸಿಕೊಟ್ಟಿರುತ್ತಾನೆ ಎಂದರೆ ಸರಿ. ಜಗಳವನ್ನು ಚಾಸಾ-೫ ರಿಂದ ೭ ರವರು ಬಿಡಿಸಿರುತ್ತಾರೆ ಎಂಧರೆ ಸರಿ. ಆರೋಪಿತರೆಲ್ಲರೂ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಪೋಲಿಸರ ಮುಂದೆ ನಾನು ಹೇಳಿಕೆ ನೀಡಿರುತ್ತೇನೆ ಎಂಧರೆ ಸರಿ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಕೆ.ಎಂ. ವಕೀಲರಿಂದ**

ಘಟನೆ ಎಷ್ಟು ಗಂಟೆಯಿಂದ ಎಷ್ಟು ಗಂಟೆ ವರೆಗೆ ನಡೆಯಿತು ಎಂದರೆ ಸಾಕ್ಷಿಯು ಘಟನೆ ೧.೦೦ ರಿಂದ ೧.೩೦ ಗಂಟೆವರೆಗೆ ನಡೆದಿರುತ್ತದೆ ಎಂದು ನುಡಿಯುತ್ತಾರೆ. ನಾನು ಬಿ.ಎ. ಬಿ.ಎಡ್ ಪಧವಿಧರಳು ಇರುತ್ತೇನೆ ಎಂಧರೆ ಸರಿ. ಆಸ್ಪತ್ರೆಗೆ ನಾನು, ಚಾಸಾ-೧, ಚಾಸಾ-೫ ಮತ್ತು ಸಿದ್ದರಾಮ ಮತ್ತು ಇನ್ನಿತರವಾದ ನಮ್ಮ ಅಣ್ಣ ತಮಕಿ ಜನರು ಹೋಗಿರುತ್ತೇವೆ. ಪೋಲಿಸರು ಆಸ್ಪತ್ರೆಗೆ ೨.೩೦ ಗಂಟೆಗೆ ಬಂದಿರುತ್ತಾರೆ. ಫಿರ್ಯಾದಿಯನ್ನು ಆಸ್ಪತ್ರೆಯಲ್ಲಿ ತೆಗೆದುಕೊಂಡಿರುತ್ತಾರೆ. ಮು.ಮಾ-೧ ರಂತಹ ಕಟ್ಟಿಗೆಯಿಂದ ಹೊಡೆದರು ತೀವ್ರ ಸ್ವರೂಪದ ಗಾಯಗಳಾಗುವುದಿಲ್ಲ ಅದು ಚಿಕ್ಕ ಕಟ್ಟಿಗೆ ಇರುತ್ತದೆ ಎಂದರೆ ಸಾಕ್ಷಿಯು ಅದೇ ಕಟ್ಟಿಗೆಯಿಂದ ೫-೬ ಬಾರಿ ಒಂದೇ ಜಾಗದಲ್ಲಿ ಹೊಡೆದರು ರಕ್ತಗಾಯಗಳಾಗುತ್ತವೆ ಎಂಧು ನುಡಿಯುತ್ತಾರೆ. ಆರೋಪಿ ನಂ. ೧ ರವರು ೨೦೧೮ ನೇ ಇಸವಿಯಲ್ಲಿ ಕಲಬುರಗಿ ವಿಶ್ವವಿದ್ಯಾಲಯದಲ್ಲಿ ಪಿ.ಹೆಚ್.ಡಿ. ವಿದ್ಯಾಭ್ಯಾಸ ಮಾಡುತ್ತಿದ್ರು, ಅವರು ಯಾವತ್ತು ಹೊನ್ನಳ್ಳಿ ಗ್ರಾಮಕ್ಕೆ ಬಂದಿರುವುದಿಲ್ಲ, ಸದರಿ ದಿನದ ಕಾರ್ಯಕ್ರಮಕ್ಕೂ ಬಂದಿರುವುದಿಲ್ಲ ಎಂದರೆ ಸರಿ ಅಲ್ಲ. ನಾಗಪ್ಪ ಭೀಮಶಾ ಮಾನೆ ನನ್ನ ಭಾವನಾಗಬೇಕು ಎಂದರೆ ಸರಿ, ಅವರು ರೇಷ್ಮಿ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂಧರೆ ಸರಿ. ಸದರಿ ಕಾಲೇಜಿನಲ್ಲಿ ಆಳಂದ ಪೋಲಿಸ್ ಠಾಣೆಯ ಒಬ್ಬ ಸಿಬ್ಬಂದಿಯ ಪತ್ನಿ ಅವರ ಕಾಲೇಜಿನಲ್ಲಿ ಓದುತ್ತಿದ್ದರು ಎಂಧರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ನನ್ನ ಭಾವನವರ ಪ್ರಭಾವವನ್ನು ಉಪಯೋಗಿಸಿ ಯಾವುದೇ ಘಟನೆ ನಡೆಯದಿದ್ದರೂ ನನ್ನ ಭಾವನವರು ಪ್ರಾಂಶುಪಾಲರು ಇದ್ದ ಕಾರಣ ಅವರ ಪ್ರಭಾವವನ್ನು ಬೀರಿ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿ ಖೊಟ್ಟಿ ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿತರು ನಮ್ಮ ಮೇಲೆ ಮಾಡಿರುವ ಪ್ರಕರಣದಲ್ಲಿ ಪೋಲಿಸರು ಅವರ ಪ್ರಭಾವಕ್ಕೆ ಒಳಗಾಗಿ ಅವರ ಹೆಸರನ್ನು ಕೈಬಿಟ್ಟಿರುತ್ತಾರೆ ಎಂದರೆ ಸಾಕ್ಷಿಯು ಘಟನೆ ದಿನದಂದು ಅವರು ಇರಲೇ ಇಲ್ಲ ಎಂದು ನುಡಿಯುತ್ತಾರೆ.

ನಾವು ಫಿರ್ಯಾದಿಯನ್ನು ಕೊಟ್ಟ ನಂತರ ಯಾವತ್ತು ಪೋಲಿಸರು ನಮ್ಮ ಊರಿಗೆ ಬಂದಿರುವುದಿಲ್ಲ ಎಂದರೆ ಸರಿ. ಮು.ಮಾ-೧ ಮತ್ತು ೨ನ್ನು ಪೋಲಿಸರಿಗೆ ಯಾರು ನೀಡಿದ್ದಾರೆ ಎಂಧರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂಧು ನುಡಿಯುತ್ತಾರೆ. ನಾವು ಆಸ್ಪತ್ರೆಯಿಂದ ಘಟನೆ ನಡೆದ ೧೫ ದಿನಗಳ ನಂತರ ಬಿಡುಗಡೆ ಆಗಿ ಬಂದಿರುತ್ತೇವೆ, ಆಗ ಪೋಲಿಸರು ನಮ್ಮ ಊರಿಗೆ ಸಂಜೆ ೭.೦೦ ಗಂಟೆಗೆ ಬಂದಿರುತ್ತಾರೆ. ಪೋಲಿಸರು ಬಂದಾಗ ೪-೫ ಜನ ಇದ್ದರು, ಅದರಲ್ಲಿ ಮುಕ್ತಾಬಾಯಿ ಮಾನೆ, ರುಕ್ಮಿಣಿ ಬಾಬುರಾವ ಸಿಂಗೆ, ಸುಜಾತ ಮಾನೆ, ಮಲ್ಲಮ್ಮ ಮಾನೆ ಇವರು ಇದ್ದರು. ಸದರಿಯವರು ಸಹಿಯನ್ನು ಏನಾದರೂ ಪೋಲಿಸರು ಪಡೆದುಕೊಂಡಾರ ಎಂದರೆ ಸಾಕ್ಷಿಯು ಪಡೆದುಕೊಂಡಿರುವುದಿಲ್ಲ, ಘಟನೆ ಬಗ್ಗೆ ಕೇಳಿರುತ್ತಾರೆ ಎಂದು ನುಡಿಯುತ್ತಾರೆ. ಆರೊಪಿತರು ಯಾವತ್ತೂ ಮು.ಮಾ-೧ ಮತ್ತು ೨ ರಿಂದ ಹೊಡೆ ಬಡೆ ಮಾಡಿರುವುದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸರಿ ಅಲ್ಲ. ನಮ್ಮ ಎತ್ತು ಮತ್ತು ಆರೋಪಿತರ ಎತ್ತು ಕಾದಾಡಿದ ಸಲುವಾಗಿ ಅವರ ಮತ್ತು ನಮ್ಮ ನಡುವೆ ವೈಮನಸ್ಸು ಇರುತ್ತದೆ ಎಂದರೆ ಸಾಕ್ಷಿಯು ಎತ್ತು ಕಾದಾಡಿದ ವಿಷಯ ನನಗೆ ಹೇಳಿರುತ್ತಾರೆ, ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಆರೋಪಿ ನಂ.೨ ರವರು ಪಧವಿಧರರು ಇರುತ್ತಾರೆ ಎಂಧರೆ ಸರಿ. ಸದರಿ ಘಟನೆ ನಡೆದಿದೆ ಎಂದು ಹೇಳುತ್ತಿರಲ್ಲ ಆ ದಿನದಂದು ಆರೋಪಿ ನಂ.೨ ರವರು ಮಳೆ ಬರುತ್ತದೆ ಬೇಗ ಬೇಗ ಊಟ ಮಾಡಿ ಎಂದು ಹೇಳಿದಕ್ಕೆ ಸದರಿ ವೈಮನಸ್ಸಿನಿಂದ ಅವರ ಜೊತೆ ಜಗಳ ತೆಗೆದು ಯಾವುದೇ ಘಟನೆ ನಡೆಯದಿದ್ದರೂ, ನಾನು, ಚಾಸಾ-೧ ಮತ್ತು ನನ್ನ ಭಾವ ಸೇರಿ ಆರೋಪಿತರನ್ನೆ ಹೊಡೆ ಬಡೆ ಮಾಡಿ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ನಂ.೩ ರವರಿಗೆ ೭೦ ವರ್ಷ ವಯಸ್ಸಾಗಿರುತ್ತದೆ, ಅವರಿಗೆ ನಿಲ್ಲಲು ಬರುವುದಿಲ್ಲ, ಹೊಡೆ ಬಡೆ ಮಾಡುವ ಪ್ರಶ್ನೆಯೇ ಬರುವುದಿಲ್ಲ ಎಂದರೆ ಸರಿ ಅಲ್ಲ.

ದಿ.೧೬.೦೪.೨೦೧೮ ರಂದು ನಮ್ಮ ಊರಿನಲ್ಲಿ ಅಂಬೇಡ್ಕರ್ ಜಯಂತಿಯನ್ನು ಆಚರಿಸುತ್ತಿದ್ದರು. ಸದರಿ ಅಂಬೇಡ್ಕರ್ ಜಯಂತಿಯ ನಿಮಿತ್ಯ ಊಟವನ್ನು ಹಮ್ಮಿಕೊಂಡಿದ್ದರು. ಸದರಿ ದಿನಂದು ಚಾಸಾ-೧ ರವರು ಊಟಕ್ಕೆ ಕುಳಿತಾಗ ಆರೋಪಿತರೆಲ್ಲರೂ ಬಂದು ಚಾಸಾ-೧ ರವರಿಗೆ ಬೈದು ಹೊಡೆ ಬಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ನಂ-೧ ಕಟ್ಟಿಗೆಯಿಂದ, ಆರೋಪಿ ನಂ-೨ ಕಲ್ಲಿನಿಂದ, ಆರೋಪಿ ನಂ-೩ ಬಾಯಿಯಿಂದ ಕಚ್ಚಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸದರಿ ಘಟನೆಯಲ್ಲಿ ಚಾಸಾ-೧ ರವರಿ ತೀವ್ರ ಸ್ವರೂಪದ ರಕ್ತಗಾಯಗಳು ಆದ ಕಾರಣ ನಾನು ಚಾಸಾ-೧ ರವರನ್ನು ಖಾಸಗಿ ಜೀಪಿನಲ್ಲಿ ಆಳಂದ ಪೋಲಿಸ್ ಠಾಣೆಗೆ ಕರೆದುಕೊಂಡು ಬಂದಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಅಲ್ಲಿ ಪೋಲಿಸರು ತೀವ್ರ ಸ್ವರೂಒಪದ ಗಾಯಗಳು ಇದ್ದ ಕಾರಣ ಆಸ್ಪತ್ರೆಗೆ ಹೋಗಿ ದಾಖಲಾಗಿ ಎಂದು ಹೇಳಿದರು, ನಾನು ಆಸ್ಪತ್ರೆಗೆ ದಾಖಲಾದ ನಂತರ ಅಲ್ಲಿ ಒಬ್ಬ ಪೋಲಿಸರು ಬಂದು ಚಾಸಾ-೧ ರವರ ಹೇಳಿಕೆಯನ್ನು ಪಡೆದುಕೊಂಡರು, ನಂತರ ಹೆಚ್ಚಿನ ಚಿಕಿತ್ಸೆಗಾಗಿ ವೈದ್ಯರು ಕಲಬುರಗಿ ಆಸ್ಪತ್ರೆಗೆ ಕಳಿಸಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಅಂಬೇಡ್ಕರ ಜಯಂತಿ ಇದ್ದ ಕಾರಣ ಚಾಸಾ-೧ ರವರು ಊಟ ಮಾಡುತ್ತಿದ್ದರು, ಆಗ ಮಧ್ಯಾಹ್ನ ೧.೦೦ ಗಂಟೆ ಆಗಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೊಪಿ ನಂ.೧ ಕಟ್ಟಿಗೆಯಿಂದ ಚಾಸಾ-೧ ರವರ ತಲೆಗೆ ಹೊಡೆದನು, ಆರೋಪಿ ನಂ.೩ ಚಾಸಾ-೧ ರವರ ಎದೆಗೆ ಕಚ್ಚಿರುತ್ತಾನೆ, ನಾನು ಜಗಳವನ್ನು ಬಿಡಿಸಲು ಹೋದಾಗ ಆರೊಪಿ ನಂ-೩ ನನ್ನನ್ನು ನೂಕಿಸಿಕೊಟ್ಟಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ, ಜಗಳವನ್ನು ಚಾಸಾ-೫ ರಿಂದ ೭ ರವರು ಬಿಡಿಸಿರುತ್ತಾರೆ, ಆರೋಪಿತರೆಲ್ಲರೂ ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.

ಸಿ.ಸಿ.ನಂಃ 270/2019 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ರವೀಂಧ್ರ |
| ತಂದೆಃ ಗಂಡ | ಃ | ಭೀಮಶಾ |
| ವಯಸ್ಸು | ಃ | ೪೨ ವರ್ಷ |
| ಉದ್ಯೋಗ | : | ಒಕ್ಕಲುತನ |
| ವಾಸಸ್ಥಳ | ಃ | ಹೊನ್ನಳ್ಳಿ |

ದಿನಾಂಕಃ೧೮.೧೧.೨೦೨೩

ಸತ್ಯ ಪ್ರತಿಜ್ಞೆಯ ಮೇರೆಗೆ

---

### ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ

ಆರೋಪಿತರ ಪರಿಚಯ ಇರುತ್ತದೆ. ಚಾಸಾ-೪ ನನ್ನ ಹೆಂಡತಿ, ಚಾಸಾ-2, 3, 5 ರಿಂದ 7 ರವರ ಪರಿಚಯ ಇರುತ್ತದೆ.

ದಿ.16.04.2018 ರಂದು ಅಂಬೇಡ್ಕರ್ ಜಯಂತಿ ಊರಿನಲ್ಲಿ ನಡೆದಿತ್ತು, ಸದರಿ ಪಂಕ್ಷನನಲ್ಲಿ ನಾನು ಊಟ ಮಾಡುತ್ತಿದ್ದೆನು, ಆಗ ಆರೋಪಿತರೆಲ್ಲರೂ ಬಂದು ರಂಡಿ ಮಗ ಎಂದು ಬೈದು ಹೊಡೆ ಬಡೆ ಮಾಡಿರುತ್ತಾರೆ. ಒಬ್ಬ ಆರೋಪಿ ಕಟ್ಟಿಗೆಯಿಂದ, ಇನ್ನೊಬ್ಬ ಆರೋಪಿ ಕಲ್ಲಿನಿಂದ, ಮತ್ತೊಬ್ಬ ಆರೋಪಿ ಬಾಯಿಯಿಂದ ಕಚ್ಚಿರುತ್ತಾನೆ. ನಂತರ ನಾನು ಆಳಂದ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ಅಲ್ಲಿ ನಾನು ಚಿಕಿತ್ಸೆ ಪಡೆದುಕೊಂಡಿರುತ್ತೇನೆ, ನಂತರ ಪೋಲಿಸರು ಆಸ್ಪತ್ರೆಗೆ ಬಂದು ನನ್ನ ಫಿರ್ಯಾದಿಯನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಹೆಬ್ಬೆಟ್ಟಿನ ಗುರುತನ್ನು ನೋಡಿ ಗುರುತಿಸಿರುವುದರಿಂದ, ಫಿರ್ಯಾದಿಯನ್ನು ನಿಪಿ-೧ ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳಾದ ಕಟ್ಟಿಗೆ ಮತ್ತು ಕಲ್ಲನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಕ್ರಮವಾಗಿ ಮು.ಮಾ-೧ ಮತ್ತು ೨ ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು)

### ಪಾಟೀ ಸವಾಲು ಃ ಸ.ಸ.ಅ. ವಕೀಲರಿಂದ.

ಅಂಬೇಡ್ಕರ ಜಯಂತಿ ದಿನ ನಾನು ಧರ್ಮಶಾಲೆಯಲ್ಲಿ ಊಟ ಮಾಡುತ್ತಾ ಕುಳಿತಿದ್ದೆನು ಎಂದರೆ ಸರಿ. ಆಗ ಸಮಯ ಮಧ್ಯಾಹ್ನ ೧.೦೦ ಗಂಟೆ ಆಗಿತ್ತು ಎಂದರೆ ಸರಿ. ಆರೋಪಿತರೆಲ್ಲರೂ ಬಂದು ಎಷ್ಟು ಹೊತ್ತಿನ ತನ ಊಟ ಮಾಡುತ್ತೀಯ ರಂಡಿ ಮಗನೆ ಎಂದು ಹೇಳಿ ಬೈದರು ಎಂಧರೆ ಸರಿ, ಸಾಕ್ಷಿ ಮುಂದುವರೆದು ನೂಕಿಸಿಕೊಟ್ಟರು ಎಂದು ನುಡಿಯುತ್ತಾರೆ. ಆರೋಪಿ ನಂ.೩ ಚಾಸಾ-೪ ರವರನ್ನು ಸಹ

ಕೂಡ ನೂಕಿಸಿಕೊಟ್ಟಿರುತ್ತಾನೆ ಎಂದರೆ ಸರಿ. ಸದರಿ ಜಗಳವನ್ನು ಚಾಸಾ-೫ ರಿಂದ ೭ ರವರು ಬಿಡಿಸಿರುತ್ತಾರೆ ಎಂದರೆ ಸರಿ. ಆರೋಪಿತರು ನನಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂಧರೆ ಸರಿ.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಕೆ.ಎಂ. ವಕೀಲರಿಂದ</u>**

ಘಟನೆ ಎಷ್ಟು ಗಂಟೆಯಿಂದ ಎಷ್ಟು ಗಂಟೆ ವರೆಗೆ ನಡೆಯಿತು ಎಂದರೆ ಸಾಕ್ಷಿಯು ನನಗೆ ಹೇಳಲು ಬರುವುದಿಲ್ಲ, ಘಟನೆ ೧.೩೦ ಗಂಟೆಗೆ ಆರಂಭವಾಗಿರುತ್ತದೆ ಎಂದು ನುಡಿಯುತ್ತಾರೆ. ಜಗಳವು ಸುಮಾರು ಒಂದರಿಂದ ಒಂದುವರೆ ಗಂಟೆವರೆಗೆ ನಡೆದಿರುತ್ತದೆ. ಕಟ್ಟಿಗೆಯಿಂದ ಹೊಡೆದರು ಎಂದು ಹೇಳುತ್ತಿರಲ್ಲ ಕಟ್ಟಿಗೆಯಿಂದ ಯಾರು ಹೊಡೆದರು ಎಂದರೆ ಸಾಕ್ಷಿ ಆರೊಪಿ ನಂ.೧ ಹೊಡದಿರುತ್ತಾರೆ, ಕಲ್ಲಿನಿಂದ ಆರೋಪಿ ನಂ.೨ ಹೊಡೆದಿರುತ್ತಾರೆ, ಆರೊಪಿ ನಂ.೩ ಕಚ್ಚಿರುತ್ತಾರೆ. ಕಟ್ಟಿಗೆಯಿಂದ ಹೊಡೆದರು ಎಂದು ಹೇಳುತ್ತಿರಲ್ಲ, ಎಲ್ಲಿಗೆ ಹೊಡೆದರು ಎಂದರೆ ಸಾಕ್ಷಿಯು ಬಲಭಾಗದ ಹಣೆಗೆ ಹೊಡೆದರು ಎಂದು ನುಡಿಯುತ್ತಾರೆ. ಸದರಿ ಘಟನೆ ನಡೆದಿದೆ ಎಂದು ಹೇಳುತ್ತಿರಲ್ಲ, ಆ ದಿನದಂದು ಆರೋಪಿ ನಂ.೨ ರವರು ಕಲಬುರಗಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದರು, ಅವರು ಯಾವತ್ತೂ ೨೦೧೮ ನೇ ಇಸವಿಯಲ್ಲಿ ಊರಿಗೆ ಬಂದಿರುವುದಿಲ್ಲ ಮತ್ತು ಅಂಬೇಡ್ಕರ ಜಯಂತಿ ಕಾರ್ಯಕ್ರಮಕ್ಕೆ ಹಾಜರಿರುವುದಿಲ್ಲ ಎಂಧರೆ ಸರಿ ಅಲ್ಲ. ನನ್ನ ಸಹೋದರನಾದ ನಾಗಪ್ಪ ರೇಷ್ಮಿ ಕಾಲೇಜಿನಲ್ಲಿ ಪ್ರಾಂಶುಪಾಲರು ಎಂದು ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿ. ನನ್ನ ಸಹೋದರನ ಪ್ರಾಂಶುಪಾಲರು ಇರುವ ಕಾಲೇಜಿನ ಆಳಂದ ಪೋಲಿಸ್ ಠಾಣೆಯ ಒಬ್ಬ ಸಿಬ್ಬಂದಿಯ ಪತ್ನಿ ಅವರ ಕಾಲೇಜಿನಲ್ಲಿ ಓದುತ್ತಿದ್ದರು ಎಂಧರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾವುದೇ ಘಟನೆ ನಡೆಯದಿದ್ದರೂ ನನ್ನ ಸಹೋದರ ಪ್ರಾಂಶುಪಾಲರು ಇದ್ದ ಕಾರಣ ಅವರ ಪ್ರಭಾವವನ್ನು ಬೀರಿ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿ ಖೊಟ್ಟಿ ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

ಸದರಿ ಘಟನೆ ಆದ ನಂತರ ಆಸ್ಪತ್ರೆಗೆ ಬಂದಿದ್ದೇನೆ ಎಂದು ಹೇಳುತ್ತಿರಲ್ಲ, ನಿಮ್ಮ ಜೊತೆ ಯಾರ ಯಾರು ಬಂದಿದ್ದರು ಎಂದರೆ ನಾನು ಮತ್ತು ಚಾಸಾ-೪ ಬಂದಿದ್ದೆವು, ಆಸ್ತ್ರೆಯಲ್ಲಿದ್ದಾಗ ನನ್ನ ಚಿಕ್ಕಮ್ಮ ಬಂದಿದ್ದರು ಎಂದು ನುಡಿಯುತ್ತಾರೆ. ಆಸ್ಪತ್ರೆಗೆ ನಾನು ಎಷ್ಟು ಗಂಟೆಗೆ ಬಂದಿದ್ದೇನೆ ಎಂದು ಹೇಳಲು ಬರುವುದಿಲ್ಲ. ನಾನು ಫಿರ್ಯಾದಿಯನ್ನು ಕೊಟ್ಟ ನಂತರ ಯಾವತ್ತು ಪೋಲಿಸರು ನಮ್ಮ ಊರಿಗೆ ಬಂದಿರುವುದಿಲ್ಲ. ಪೋಲಿಸರು ಘಟನಾ ನಡೆದ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಜರುಗಿಸಿರುವುದಿಲ್ಲ. ನಮ್ಮ ಎತ್ತು ಮತ್ತು ಆರೋಪಿತರ ಎತ್ತು ಕಾದಾಡಿದ ಸಲುವಾಗಿ ಅವರ ಮತ್ತು ನಮ್ಮ ನಡುವೆ ವೈಮನಸ್ಸು ಇರುತ್ತದೆ ಎಂದರೆ ಸರಿ.

ಸದರಿ ಘಟನೆ ನಡೆದಿದೆ ಎಂದು ಹೇಳುತ್ತಿರಲ್ಲ ಆ ದಿನದಂದು ಆರೋಪಿ ನಂ.೨ ರವರು ಮಳೆ ಬರುತ್ತದೆ ಬೇಗ ಬೇಗ ಊಟ ಮಾಡಿ ಎಂದು ಹೇಳಿದಕ್ಕೆ ಸದರಿ ವೈಮನ್ಸಿನಿಂದ ಅವರ ಜೊತೆ ಜಗಳ ತೆಗೆದು ಯಾವುದೇ ಘಟನೆ ನಡೆಯದಿದ್ದರೂ, ಹೊಡೆ ಬಡೆ ಮಾಡದಿದ್ದರೂ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಸದರಿ ಜಯಂತಿಯಲ್ಲಿ ಸರಾಯಿ ಕುಡಿದು ಜಿಗಿದಾಡಿ ಬಿದ್ದು ರಕ್ತಗಾಯಪಡಿಸಿಕೊಂಡು ಯಾವುದೇ ಘಟನೆ ನಡೆಯದಿದ್ದರೂ ವೈಮನಸ್ಸನಿಂದ ಖೊಟ್ಟಿ ಫಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ದಿ.೧೬.೦೪.೨೦೧೮ ರಂದು ಅಂಬೇಡ್ಕರ್ ಜಯಂತಿ ಊರಿನಲ್ಲಿ ನಡೆದಿತ್ತು, ಸದರಿ ಪಂಕ್ಷನನಲ್ಲಿ ನಾನು ಊಟ ಮಾಡುತ್ತಿದ್ದೆನು, ಆಗ ಆರೋಪಿತರೆಲ್ಲರೂ ಬಂದು ರಂಡಿ ಮಗ ಎಂದು ಬೈದು ಹೊಡೆ ಬಡೆ ಮಾಡಿರುತ್ತಾರೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಒಬ್ಬ ಆರೋಪಿ ಕಟ್ಟಿಗೆಯಿಂದ, ಇನ್ನೊಬ್ಬ ಆರೋಪಿ ಕಲ್ಲಿನಿಂದ, ಮತ್ತೊಬ್ಬ ಆರೋಪಿ ಬಾಯಿಯಿಂದ ಕಚ್ಚಿರುತ್ತಾನೆ, ನಂತರ ನಾನು ಆಳಂದ ಆಸ್ಪತ್ರೆಗೆ ದಾಖಲಾಗಿರುತ್ತೇನೆ, ಅಲ್ಲಿ ನಾನು ಚಿಕಿತ್ಸೆ ಪಡೆದುಕೊಂಡಿರುತ್ತೇನೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ನಂತರ ಪೋಲಿಸರು ಆಸ್ಪತ್ರೆಗೆ ಬಂದು ನನ್ನ ಫಿರ್ಯಾದಿಯನ್ನು ಪಡೆದುಕೊಂಡಿರುತ್ತಾರೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಅಂಬೇಡ್ಕರ ಜಯಂತಿ ದಿನ ನಾನು ಧರ್ಮಶಾಲೆಯಲ್ಲಿ ಊಟ ಮಾಡುತ್ತಾ ಕುಳಿತಿದ್ದೆನು, ಆಗ ಸಮಯ ಮಧ್ಯಾಹ್ನ ೧.೦೦ ಗಂಟೆ ಆಗಿತ್ತು, ಆರೋಪಿತರೆಲ್ಲರೂ ಬಂದು ಎಷ್ಟು ಹೊತ್ತಿನ ತನ ಊಟ ಮಾಡುತ್ತೀಯ ರಂಡಿ ಮಗನೆ ಎಂದು ಹೇಳಿ ಬೈದರು, ನೂಕಿಸಿಕೊಟ್ಟರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ನಂ.೩ ಚಾಸಾ-೪ ರವರನ್ನು ಸಹ ಕೂಡ ನೂಕಿಸಿಕೊಟ್ಟಿರುತ್ತಾನೆ, ಸದರಿ ಜಗಳವನ್ನು ಚಾಸಾ-೫ ರಿಂದ ೭ ರವರು ಬಿಡಿಸಿರುತ್ತಾರೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿತರು ನನಗೆ ಜೀವ ಬೆದರಿಕೆ ಹಾಕಿರುತ್ತಾರೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ